**ದಿನಾಂಕಃ 29.07.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಾದ ಶ್ರೀ.HCB ರವರಿಂದಃ**

1) ಅಪಘಾತದ ಸಂಬಂಧವಾಗಿ ಪೋಲಿಸರಿಗೆ ದೂರನ್ನು ನನ್ನ ಮಗನಾದ ಪೊನ್ನಣ್ಣ ರವರು ನೀಡಿದ್ದಾರೆ. ಅಪಘಾತದ ಬಗ್ಗೆ ನನ್ನ ಮಗನು ಪೋಲಿಸರಿಗೆ ದೂರನ್ನು ಕೊಟ್ಟಿರುವುದಿಲ್ಲ, ಆದರೆ ಒಂದು ದಿನ ತಡವಾಗಿ ನಾನೇ ದೂರನ್ನು ಕೊಟ್ಟಿದ್ದೇನೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "ಅಪಘಾತದಲ್ಲಿ ಗಾಯಗಳು ಆದಕಾರಣದಿಂದ ನನಗೆ ಪ್ರಜ್ಞೆಯು ಹೋಗಿತ್ತು, ಮತ್ತು ಮಾರನೇ ದಿನ ನನಗೆ ಪ್ರಜ್ಞೆ ಬಂತು, ಮತ್ತು ನಾನು ಆಸ್ಪತ್ರೆಯಲ್ಲಿ ಇದ್ದಾಗಲೇ ಪೋಲಿಸರು ಆಸ್ಪತ್ರೆಗೆ ಬಂದು ಅಪಘಾತದ ಸಂಬಂಧವಾಗಿ ನನ್ನನ್ನು ವಿಚಾರಣೆ ಮಾಡಿದ್ದಾರೆ" ಎಂದು ನುಡಿದಿದ್ದಾರೆ.

2) ಅಪಘಾತದ ಸಂಬಂಧವಾಗಿ ನನ್ನ ಮಗನು ಪೋಲಿಸರಿಗೆ ದೂರನ್ನು ಕೊಟ್ಟಿದ್ದಾರೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಅಪಘಾತದ ಸಮಯದಲ್ಲಿ ನಾನು ನಡೆದುಕೊಂಡು ಹೋಗುತ್ತಿದ್ದೆನು ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಆ ಸಮಯದಲ್ಲಿ ಸಿಗ್ನಲ್ ಬಿದ್ದಿತ್ತು, ಆ ಕಾರಣದಿಂದ ನಾನು ನಿಂತಿದ್ದೆನು" ಎಂದು ನುಡಿದಿದ್ದಾರೆ.

3) ರಸ್ತೆಯ ಮೂಲೆಯಲ್ಲಿ ನಾನು ನಿಂತಿದ್ದೆನು ಮತ್ತು ಆಗ ಅಪಘಾತವು ಆಗಿದೆ. ಸಾಕ್ಷಿಯು ಮುಂದುವರೆದು "ಆತನು **one way** ಯಲ್ಲಿ ಬಂದು ನನಗೆ ಡಿಕ್ಕಿ ಹೊಡೆಸಿದನು" ಎಂದು ನುಡಿದಿದ್ದಾರೆ. ಅಪಘಾತವು ಆದಂತಹ ಸ್ಥಳದಲ್ಲಿ ಮತ್ತು ಆ ರಸ್ತೆಯಲ್ಲಿ ಫುತ್ ಪಾತ್ ಇದೆ ಎಂದರೆ ಸರಿ.

4) ನಕ್ಷೆಯಲ್ಲಿ ಅಂದರೆ ನಿ.ಪಿ.**3** ರಲ್ಲಿ ಇರುವಂತಹ ಮಾಹಿತಿಯ ಪ್ರಕಾರ ಯಾವ ಜಾಗದಲ್ಲಿ ನನಗೆ ಅಪಘಾತ ಆಗಿದೆಯೋ ಆ ಸ್ಥಳದಿಂದ ಮತ್ತೆ **10** ಅಡಿ ದೂರದಲ್ಲಿ ಜೀಬ್ರಾ ಕ್ರಾಸಿಂಗ್ ಇತ್ತು ಎಂದು ಕಂಡು ಬರುತ್ತದೆ ಎಂದರೆ ಸರಿ.

5) ನಿ.ಪಿ.**3** ರಲ್ಲಿ ಇರುವಂತಹ ಮಾಹಿತಿಯ ಪ್ರಕಾರ ರಸ್ತೆ ದಾಟಲು ನಿಗದಿಪಡಿಸಿದ ಸ್ಥಳವು ಅಂದರೆ ಜೀಬ್ರಾ ಕ್ರಾಸ್ ಎಂಬ ಸ್ಥಳವು ನಾನು ನಿಂತಿದ್ದ ಸ್ಥಳದಿಂದ ದೂರದಲ್ಲಿ ಇತ್ತು ಎಂದರೆ ಸರಿ.

6) ಯಾವ ಸ್ಥಳದಲ್ಲಿ ನಾನು ರಸ್ತೆಯನ್ನು ದಾಟುವ ಸಲುವಾಗಿ ನಿಂತಿದ್ದೆನೋ ಆ ಸ್ಥಳದಲ್ಲಿ ರಸ್ತೆ ದಾಟುವುದಕ್ಕೆ ಅವಕಾಶವೇ ಇರುವುದಿಲ್ಲ ಎಂದರೆ ಜನರು ಅಲ್ಲಿ ಆಕಡೆ ಈಕಡೆ ಹೋಗುತ್ತಿದ್ದರು ಮತ್ತು ನನಗೆ ಬೇರೆ ದಾರಿ ಇರಲಿಲ್ಲ, ಹಾಗಾಗಿ ನಾನು ಆ ಸ್ಥಳದಲ್ಲಿ ನಿಂತುಕೊಂಡಿದ್ದೆನು.

7) ಅಪಘಾತದ ಸಮಯದಲ್ಲಿ ನನ್ನ ಜೊತೆಯಲ್ಲಿ ಪೂಜಾ ಎಂಬ ಹೆಸರಿನ ನಮ್ಮ ಸಂಬಂಧಿ ಹುಡುಗಿಯು ಇದ್ದರು ಎಂದರೆ ಸರಿ. ಸದರಿ ಪೂಜಾ ರವರಿಗೆ ಅಪಘಾತವು ಆಗಿರುವುದಿಲ್ಲ ಮತ್ತು ಆಕೆಗೆ ಯಾವುದೇ ನೋವು ಆಗಿರುವುದಿಲ್ಲ ಎಂದರೆ ಸರಿ.

8) ಪೂಜಾಳ ಮಾತನ್ನು ನಾನು ಕೇಳಿದ್ದ ಪಕ್ಷದಲ್ಲಿ ಅಪಘಾತವು ಆಗುತ್ತಿರಲಿಲ್ಲ ಎಂದರೆ ಸುಳ್ಳು. ನಾನು ಏಕಾಏಕಿ ಓಡಿ ಹೋಗಿ ರಸ್ತೆಯನ್ನು ದಾಟಲು ಪ್ರಯತ್ನ ಮಾಡಿದ್ದೇನೆ ಮತ್ತು ಆ ಕಾರಣದಿಂದ ಅಪಘಾತವು ಆಗಿದೆ ಎಂದರೆ ಸುಳ್ಳು.

9) ಅಪಘಾತದ ನಂತರ ನನ್ನನ್ನು ಯಶವಂತಪುರದಲ್ಲಿ ಇರುವಂತಹ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ.

10) ಸದರಿ ಆಸ್ಪತ್ರೆಯಲ್ಲಿ ನಾನು **3** ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ.

11) ನಿ.ಪಿ.**8** ಎಂದು ಗುರುತು ಆಗಿರುವ ಡಿಸ್ಚಾರ್ಜ್ ಸಮ್ಮರಿಯಲ್ಲಿ ಇರುವ ಮಾಹಿತಿಯ ಪ್ರಕಾರ ಮೊದಲಿನಿಂದಲೂ ನನಗೆ ಕಾಲಿನ ತೊಂದರೆ ಇದೆ ಎಂದು ಕಂಡು ಬರುತ್ತದೆ ಎಂದರೆ ಸುಳ್ಳು.

12) **Bharath Electronics** ಸಂಸ್ಥೆಯಲ್ಲಿ ನಾನು ನೌಕರಿ ಮಾಡುತ್ತಿದ್ದೆನು ಮತ್ತು ನಾನು ನಿವೃತ್ತಿ ಆಗುವ ಸಮಯದಲ್ಲಿ ನಾನು **Junior Purchase Officer** ಆಗಿದ್ದೆನು. ಸುಮಾರು **15** ವರ್ಷಗಳ ಹಿಂದೆ ನಾನು ನಿವೃತ್ತಿ ಆಗಿದ್ದೇನೆ.

13) **Wealth for Go** ಎಂಬ ಸಂಸ್ಥೆಯಲ್ಲಿ ನನ್ನ ಮಗನು **Executive Director** ಆಗಿದ್ದಾನೆ. ನನ್ನ ಮಗನಿಗೆ ಮೆಡಿಕಲ್ **Reimbursement** ಸೌಲಭ್ಯ ಇದೆ ಎಂದರೆ ಆ ಸೌಲಭ್ಯವು ಆತನಿಗೆ ಮತ್ತು ಆತನ ಹೆಂಡತಿ ಮಕ್ಕಳಿಗೆ ಮಾತ್ರ ಇದೆ. ಸಾಕ್ಷಿಯು ಮುಂದುವರೆದು "ನನಗೆ ಆಗಿದ್ದಂತಹ ಖರ್ಚುಗಳ ಸಂಬಂಧವಾಗಿ ನನ್ನ ಮಗನು ಕೆಲಸ ಮಾಡುವ ಸಂಸ್ಥೆಯಿಂದ ನಾನು ಯಾವುದೇ ಹಣ ಪಡೆದುಕೊಂಡಿರುವುದಿಲ್ಲ" ಎಂದು ನುಡಿದಿದ್ದಾರೆ. ನನ್ನ ಮಗನು ಕೆಲಸ ಮಾಡುವ ಕಂಪೆನಿಯಿಂದ ಒಂದು ಹಿಂಬರಹವನ್ನು ತಂದು ಹಾಕಲು ಸಾಧ್ಯವಿದೆಯೋ ಹೇಗೆ ಎಂದರೆ ನನ್ನ ಮಗನನ್ನು ಕೇಳಬೇಕು. ಈಗ ಹೇಳುತ್ತೇನೆ ನಾನು ಆ ಕಂಪೆನಿಯಿಂಂದ ಯಾವುದೇ ಹಣ ಪಡೆದುಕೊಂಡಿಲ್ಲ, ಆ ಕಾರಣದಿಂದ ಆ ದಾಖಲೆಯನ್ನು ತಂದು ಕೊಡಲು ಆಗುವುದಿಲ್ಲ.

14) ನನ್ನ ಗಂಡನು **Military** ಯಲ್ಲಿ ಇದ್ದು ಸ್ವಯಂ ನಿವೃತ್ತಿಯನ್ನು ಪಡೆದುಕೊಂಡಿದ್ದಾರೆ. ಅವರಿಗೆ ಯಾವುದೇ ಪಿಂಚಣಿ ಇಲ್ಲ. **Military**

ಯಲ್ಲಿ ಕೆಲಸ ಮಾಡಿರುವಂತಹ ಅಧಿಕಾರಿಗಳಿಗೆ ಮತ್ತು ಅವರ ಹೆಂಡತಿ ಮತ್ತು ಮಕ್ಕಳಿಗೆ ಸರ್ಕಾರವೇ ವೈದ್ಯಕೀಯ ವೆಚ್ಚವನ್ನು ಭರಿಸುತ್ತದೆ ಎಂದರೆ ಸುಳ್ಳು. ರಕ್ಷಣಾ ಇಲಾಖೆಯಿಂದ **(Military)** ಯಾವುದೇ ಹಿಂಬರಹವನ್ನು ತಂದು ಹಾಜರುಪಡಿಸಲು ಸಾಧ್ಯವಿಲ್ಲ. ನಾನು ಬಿ.ಇ.ಎಲ್ ಸಂಸ್ಥೆಯಲ್ಲಿ ನೌಕರಿ ಮಾಡಿ ನಿವೃತ್ತಿ ಆಗಿರುವ ಕಾರಣದಿಂದ ನನಗೆ ಮೆಡಿಕಲ್ **Reimbursement** ಬರುತ್ತದೆ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "ನನ್ನ ಮಗಳು ಸಹಾ ಬಿ.ಇ.ಎಲ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾಳೆ ಮತ್ತು ಆಕೆಯ ಮೂಲಕ ನಮಗೆ ಮೆಡಿಕಲ್ **Reimbursement** ಬರುತ್ತದೆ" ಎಂದು ನುಡಿದಿದ್ದಾರೆ.

15) ನಿ.ಪಿ.**10** ಎಂದು ಗುರುತು ಆಗಿರುವ ದಾಖಲೆಯು ಒರಿಜಿನಲ್ ಬಿಲ್ ಆಗಿರುವುದಿಲ್ಲ, ಬದಲಿಗೆ ಅದು ಕೇವಲ ನಕಲು ಮಾತ್ರ ಆಗಿದೆ ಎಂದರೆ ಸುಳ್ಳು. ನಿ.ಪಿ.**10** ದಾಖಲೆಯಲ್ಲಿ ಇರುವಂತಹ ಮಾಹಿತಿಯ ಪ್ರಕಾರ ನನ್ನ ವೈದ್ಯಕೀಯ ವೆಚ್ಚವನ್ನು ಬಿ.ಇ.ಎಲ್ ಸಂಸ್ಥೆಯವರು ಭರಿಸಿದ್ದಾರೆ ಎಂದರೆ ಸರಿ.

16) ನನಗೆ ಒಂದು ತಿಂಗಳಿಗೆ **1,637-00** ರೂಪಾಯಿಗಳು ಪಿಂಚಣಿ ಬರುತ್ತದೆ. ನನ್ನ ಪಿಂಚಣಿ ಹಣದ ಸಂಬಂಧವಾಗಿ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

17) ನನಗೆ ಕೈ ತುಂಬ ನಿವೃತ್ತಿ ಹಣ ಬರುತ್ತದೆ ಮತ್ತು ನನ್ನ ಗಂಡನಿಗೆ ಸಹಾ ಪಿಂಚಣಿ ಬರುತ್ತದೆ ಮತ್ತು ಬಿ.ಇ.ಎಲ್ ಸಂಸ್ಥೆಯವರು ನನ್ನ ಎಲ್ಲಾ ವೈದ್ಯಕೀಯ ವೆಚ್ಚಗಳನ್ನು ಭರಿಸುತ್ತಾರೆ ಮತ್ತು ಈ ಎಲ್ಲಾ ಕಾರಣಗಳಿಂದ ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸುಳ್ಳು.

18) ನಿವೃತ್ತಿ ಆದ ನಂತರ ನಾನು ಹಾಲಿನ ವ್ಯಾಪಾರ ಮಾಡುತ್ತಿದ್ದೇನೆ ಎನ್ನುವ ಸಂಬಂಧ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

19) ನಾನು ಯಾವುದೇ ಕೆಲಸವನ್ನು ಮಾಡುವುದಿಲ್ಲ ಮತ್ತು ನಾನು ಸುಖವಾಗಿ ಜೀವನ ನಡೆಸುತ್ತಿದ್ದೇನೆ ಎಂದರೆ ಸುಳ್ಳು. ಕೇವಲ ಪರಿಹಾರವನ್ನು ಪಡೆಯಬೇಕು ಎಂಬ ದುರುದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಮತ್ತು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

20) ಮಣಿಪಾಲ್ ಆಸ್ಪತ್ರೆಯಿಂದ ಎಂ.ಎಲ್.ಸಿ. ರಿಜಿಸ್ಟರ್ ನ ನಕಲನ್ನು ತಂದು ಹಾಜರುಪಡಿಸಲು ನನಗೆ ತೊಂದರೆ ಇದೆಯೋ ಹೇಗೆ ಎಂದರೆ ಅದೆಲ್ಲಾ ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.